# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1102 (1205)

ವಿಧಾನ ಪರಿಷತ್ತಿನ ಸದಸ್ಯರು : ಶ್ರೀ ಐವನ್ ಡಿ'ಸೋಜಾ (ವಿಧಾನ ಸಭೆಯಿಂದ ಚುನಾಯಿತರಾದವರು)

ಉತ್ತರಿಸುವವರು : ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವರು

ಉತ್ತರಿಸುವ ದಿನಾಂಕ : 18.03.2025

<table>
<tr><th>ಕ್ರ. ಸಂ.</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ</td><td>ಕರಾವಳಿ ಕರ್ನಾಟಕ ಭಾಗದಲ್ಲಿ ಪ್ರಸ್ತುತ ಎಷ್ಟು ಕೈಗಾರಿಕೆಗಳು ಕಾರ್ಯನಿರ್ವಹಿಸುತ್ತಿದೆ; ಅದರಲ್ಲಿ ಎಷ್ಟು ಮಂದಿ ಕನ್ನಡಿಗರಿಗೆ ಉದ್ಯೋಗ ನೀಡಲಾಗಿದೆ;</td><td>ಕರಾವಳಿ ಕರ್ನಾಟಕ ಭಾಗದಲ್ಲಿ ಪ್ರಸ್ತುತ ಕಾರ್ಯ ನಿರ್ವಹಿಸುತ್ತಿರುವ ಬೃಹತ್ ಮತ್ತು ಮಧ್ಯಮ ಕೈಗಾರಿಕೆಗಳ ವಿವರ ಮತ್ತು ಸ್ಥಳೀಯ ಕನ್ನಡಿಗರಿಗೆ ಉದ್ಯೋಗದ ಮಾಹಿತಿ ಈ ಕೆಳಕಂಡಂತಿದೆ.
<table>
<tr><th>ಜಿಲ್ಲೆ</th><th>ಬೃಹತ್ ಕೈಗಾರಿಕೆಗಳು</th><th>ಮಧ್ಯಮ ಕೈಗಾರಿಕೆಗಳು</th><th>ಸ್ಥಳೀಯ ಕನ್ನಡಿಗರಿಗೆ ಉದ್ಯೋಗ ನೀಡಿರುವ ಸಂಖ್ಯೆ</th></tr>
<tr><td>ದಕ್ಷಿಣ ಕನ್ನಡ</td><td>24</td><td>34</td><td>10756</td></tr>
<tr><td>ಉತ್ತರ ಕನ್ನಡ</td><td>03</td><td>02</td><td>2990</td></tr>
<tr><td>ಉಡುಪಿ</td><td>47</td><td>07</td><td>13625</td></tr>
</table></td></tr>
<tr><td>ಆ</td><td>ಇತ್ತೀಚೆಗೆ ನಡೆದ ಇನ್ವೆಸ್ಟ್ ಕರ್ನಾಟಕದಲ್ಲಿ ದಕ್ಷಿಣ ಕನ್ನಡ, ಉಡುಪಿ ಮತ್ತು ಉತ್ತರ ಕನ್ನಡ ಜಿಲ್ಲೆಗಳಲ್ಲಿ ಎಷ್ಟು ಉದ್ದಿಮೆಗಳನ್ನು ಪ್ರಾರಂಭಿಸಲು ಕರಾರು ಮಾಡಲಾಗಿದೆ; (ಜಿಲ್ಲಾವಾರು ವಿವರ ನೀಡುವುದು)</td><td>ಇತ್ತೀಚೆಗೆ ನಡೆದ ಇನ್ವೆಸ್ಟ್ ಕರ್ನಾಟಕ ಸಮಾವೇಶದಲ್ಲಿ ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ಬಂಡವಾಳ ಹೂಡಿಕೆಗಾಗಿ ಒಟ್ಟು 4 ಕಂಪನಿಗಳೊಂದಿಗೆ ಒಡಂಬಡಿಕೆ ಮಾಡಲಾಗಿರುತ್ತದೆ. ವಿವರಗಳು ಈ ಕೆಳಕಂಡಂತಿದೆ.
<table>
<tr><th>ಜಿಲ್ಲೆ</th><th>ಕರಾರು ಮಾಡಿಕೊಂಡಿರುವುದು</th></tr>
<tr><td>ದಕ್ಷಿಣ ಕನ್ನಡ</td><td>03</td></tr>
<tr><td>ಉಡುಪಿ</td><td>01</td></tr>
<tr><td>ಉತ್ತರ ಕನ್ನಡ</td><td>-</td></tr>
</table></td></tr>
<tr><td>ಇ</td><td>ದಕ್ಷಿಣ ಕನ್ನಡ ಕರಾವಳಿಯಲ್ಲಿ ಯಾವ ಯಾವ ಉದ್ದಿಮೆಗಳನ್ನು ಪ್ರಾರಂಭಿಸಲು ಇಲಾಖೆ ಕ್ರಮ ಕೈಗೊಳ್ಳುವುದು;</td><td>ಕಳೆದ 05 ವರ್ಷಗಳಲ್ಲಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಒಟ್ಟು 12 ಕೈಗಾರಿಕೆಗಳ ಸ್ಥಾಪನೆಗೆ ರಾಜ್ಯಮಟ್ಟದ ಏಕಗವಾಕ್ಷಿ ಅನುಮೋದನಾ ಸಮಿತಿಗಳಲ್ಲಿ ಅನುಮತಿ ನೀಡಲಾಗಿದೆ. ವಿವರಗಳನ್ನು ಅನುಬಂಧ ದಲ್ಲಿ ಒದಗಿಸಿದೆ.</td></tr>
<tr><td>ಈ</td><td>ದಕ್ಷಿಣ ಕನ್ನಡ ಜಿಲ್ಲೆಯ ಮಂಗಳೂರು ತಾಲ್ಲೂಕು ಬಳಕುಂಜ, ಉಳೆಪಾಡಿ ಮತ್ತು ಕೊಲ್ಲೂರು ಗ್ರಾಮಗಳಲ್ಲಿ ಯಾವ ಉದ್ದೇಶಕ್ಕಾಗಿ ಭೂಮಿಯನ್ನು ವಶಪಡಿಸಿಕೊಳ್ಳಲು ಉದ್ದೇಶಿಸಲಾಗಿದೆ; (ವಿವರ ನೀಡುವುದು)</td><td>ದಕ್ಷಿಣ ಕನ್ನಡ ಜಿಲ್ಲೆ, ಮುಲ್ಕಿ ತಾಲ್ಲೂಕು ಕೊಲ್ಲೂರು, ಬಳ್ಕುಂಜೆ ಮತ್ತು ಉಳೆಪಾಡಿ ಗ್ರಾಮಗಳಲ್ಲಿ 949.73 ಎಕರೆ ಖಾಸಗಿ ಜಮೀನು ಮತ್ತು 141.84 ಎಕರೆ ಸರಕಾರಿ ಜಮೀನು ಸೇರಿದಂತೆ ಒಟ್ಟು 1091.57 ಎಕರೆ ಜಮೀನನ್ನು ಕೈಗಾರಿಕಾ ಪ್ರದೇಶಕ್ಕಾಗಿ ಭೂಸ್ವಾಧೀನಪಡಿಸಲು ಕೆಐಎಡಿ ಕಾಯ್ದೆ 1966ರಕಲಂ 28(1) ರಡಿ ಪ್ರಾಥಮಿಕ ಅಧಿಸೂಚನೆಯಾಗಿರುತ್ತದೆ.<br>ಕಲಂ 28(4) ಅಧಿಸೂಚನೆಯ ಕರಡು ಪ್ರಸ್ತಾವನೆಯನ್ನು ತಯಾರಿಸುವ ಪ್ರಕ್ರಿಯೆ ಜಾರಿಯಲ್ಲಿರುತ್ತದೆ.</td></tr>
</table>

| | | |
|---|---|---|
| ಉ | ಸದರಿ ಗ್ರಾಮಗಳಲ್ಲಿ ಕೃಷಿ ಭೂಮಿ ಅತ್ಯಧಿಕವಾಗಿದ್ದು, ಫಲವತ್ತಾದ ಭೂಮಿಯನ್ನು ನೀಡಲು ರೈತರು ವಿರೋಧಿಸುತ್ತಿರುವುದನ್ನು ಗಣನೆಗೆ ತೆಗೆದುಕೊಳ್ಳಲಾಗಿದೆಯೇ; ಫಲವತ್ತಾದ ಭೂಮಿ ಬದಲು ಉದ್ದಿಮೆ ಸ್ಥಾಪಿಸಲು ಸರ್ಕಾರಿ ಮತ್ತು ಇತರೆ ಬರಡು ಭೂಮಿ ಇದ್ದರೂ, ರೈತರನ್ನು ಒಕ್ಕಲೆಬ್ಬಿಸುವುದು ಸರಿಯೇ; | ಸದರಿ ಅಧಿಸೂಚಿತ ಒಟ್ಟು 1091-00 ಎಕರೆ ಪ್ರದೇಶದಲ್ಲಿ ಸುಮಾರು ಶೇ.90 ಕ್ಕಿಂತಲೂ ಹೆಚ್ಚಿನ ರೈತರುಗಳು ಭೂಸ್ವಾಧೀನ ಪ್ರಕ್ರಿಯೆಯನ್ನು ಬೆಂಬಲಿಸಿರುವುದು ಕಲಂ 28(3)ರ ವಿಚಾರಣೆ ವೇಳೆಯಲ್ಲಿ ಕಂಡುಬಂದಿರುತ್ತದೆ. ಉಳಿದಂತೆ ವಿರೋಧ ವ್ಯಕ್ತಪಡಿಸಿದ ಸುಮಾರು 191-00 ಎಕರೆ ಜಮೀನಿನಲ್ಲಿ ಒಂದೊಮ್ಮೆ ಕಟ್ಟಡಗಳು, ವಾಸದ ಮನೆಗಳು, ಮತ್ತಿತರೆ ಅಭಿವೃದ್ಧಿ ಚಟುವಟಿಕೆಗಳು ನಡೆದಿದ್ದಲ್ಲಿ ನಿಯಮಾನುಸಾರ ಪರಿಶೀಲಿಸಿ ಭೂಮಾಲೀಕರುಗಳಿಗೆ ಅನಾನುಕೂಲವಾಗದಂತೆ ಹಾಗೂ ಕೈಗಾರಿಕಾ ಪ್ರದೇಶದ ಆಯಕಟ್ಟಿಗೆ ತೊಂದರೆಯಾಗದಂತೆ ಕ್ರಮ ವಹಿಸಲಾಗುತ್ತದೆ. |
| ಊ | ಸ್ಥಳೀಯರು ಭೂಮಿಯನ್ನು ನೀಡಲು ವಿರೋಧಿಸುತ್ತಿದ್ದರೂ, ಅಧಿಕಾರಿಗಳು ಬಲತ್ಕಾರವಾಗಿ ಸರ್ವೇಯನ್ನು ನಡೆಸಿ ಕಿರುಕುಳ ನೀಡುತ್ತಿರುವ ಬಗ್ಗೆ ಸರ್ಕಾರ ಕೈಗೊಂಡ ಕ್ರಮವೇನು? (ವಿವರ ನೀಡುವುದು) | |

**ಸಿಐ 109 ಎಸ್‌ಪಿಐ 2025**

**(ಎಂ.ಬಿ. ಪಾಟೀಲ)**
ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ
ಮೂಲಸೌಲಭ್ಯ ಅಭಿವೃದ್ಧಿ ಸಚಿವರು

LCQ No. 1102 (1205)

Annexure

Last Five Years approval projects in SLSWCC

| | | | | |
|---|---|---|---|---|
| 1 | SLSWCC | Mangalore Logistics Private Limited Kanara Tower. Kottara Chowki Derebail, 3-28/54 2nd floor, Mangalore - 575006 | Logistic Park | Dakshina Kannada |
| 2 | SLSWCC | Sahitya Engineering Works No.6,-141-7, Sahitya Central Excise QTRS Road, Kapithanio, Mangalore-575002 | Precision Components, Structural Metal Fabrication & Engineering Works | Dakshina Kannada |
| 3 | SLSWCC | Big Bags International Pvt. Ltd. Block No 8, Epip Industrial Area Ganjimutt, Mangalore, Dakshina Kannada - 574144 | Manufacturing of FIBC Bags Plastic | Dakshina Kannada |
| 4 | SLSWCC | Cila Agrotech Private Limited D. No. 16-7-706/12(4), 2nd Floor, Parin, Collectors Gate, Balmatta, Mangalore - 575001 | Drinking Chocolate Powder Cocoa Butter and Cocoa Powder | Dakshina Kannada |
| 5 | SLSWCC | Brighflexi International Private Limited 4-1-143/1, 2nd Floor, Gateway Building M G Road, Ballalbagh, Mangalore - 575003 | HDPE/PP/ Woven Fabric and Sacks | Dakshina Kannada |

| | | | | |
|---|---|---|---|---|
| 6 | SHLCC | ReNew E-Fuels Private Limited Block-1, Zone-6, Main Sector Road, Phase-V CommercialComplex, Golf Course Road, Gurgaon - 122009 | 1000 KTPA Green Ammonia Production facility in 2 phases (200 KTPA Green Hydrozen as a input feed) | Dakshina Kannada |
| 7 | SLSWCC | Coastal Constructions No. 25/1, Residency Road, Bangalore - 560025 | Logistics, Referring, Stacking and Warehousing | Dakshina Kannada |
| 8 | SHLCC | **Amplus Active Private Limited** (Petronas Group) 6th Floor - The Palm Square Golf Course Extension Road, Sector 66, Gurugram – 122102 | •100 KTPA Hydrogen and 500 KTPA Green Ammonia plant with Electrolyser Plant<br>•Renewable Energy plant (Solar 1428 MW and Wind 1485 MW) | Dakshina Kannada |
| 9 | SLSWCC | Rhymer Urban Constructions Private Limited No 3/2,Langford Road Shanthinagar Bangalore - 560025 | Container Maintenance, Repair, Servicing, Logistics, Supply Chain and Warehousing Facility | Dakshina Kannada |
| 10 | SLSWCC | M/s. CENTRAL WAREHOUSING CORPORATION Regional Office LF 10 4th cross Nandini Layout, Bangalore, 560096 | Storage and Warehousing service | Dakshina Kannada |

| | | | | |
|---|---|---|---|---|
| 1 | SLSWCC | M/s BRIGHT GLOBAL-TEX INDUSTRIES PRIVATE LIMITED No.162A, Baikampady Industrial Area, Mangalore, Dakshina Kannada - 575011 | Technical Textiles | Dakshina Kannada |
| 12 | SLSWCC | M/s Fiza Industrial Corporation No. 25/1, Residency Road, Bangalore – 560 025 | Container Maintenance, Repair and Servicing Project, | Dakshina Kannada |